All India Radio: Bangalore
National Bulletin In Kannada
02.06.2025 1.10 p.m.
ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

02.06.2025 1.10 p.m.
**********

ಮುಖ್ಯಾಂಶಗಳು

೧. ಭಾರತಕ್ಕೆ ಆಗಮಿಸಿದ ಪೆರಾಗ್ವೆ ಅಧ್ಯಕ್ಷ ಸ್ಯಾಂಟಿಯಾಗೊ ಪೆನಾ ಪೆಲಾಶಿಯಸ್; ಪ್ರಧಾನಿ ನರೇಂದ್ರ ಮೋದಿಯವರೊಂದಿಗೆ ಸಮಾಲೋಚನೆ

೨. ೮೧ನೇ ಐಎಟಿಎ ವಾರ್ಷಿಕ ಮಹಾಸಭೆಯಲ್ಲಿ ಭಾಗಿಯಾಗಲಿರುವ ಪ್ರಧಾನಿ: ವಿಮಾನೋದ್ಯಮ ಸಂಬಂಧಿ ವಿವಿಧ ವಿಷಯಗಳ ಚರ್ಚೆ

೩. ಭಾರತದ ಸರ್ವಪಕ್ಷ ನಿಯೋಗಗಳಿಂದ ಜಾಗತಿಕ ಮಟ್ಟದಲ್ಲಿ ಭಯೋತ್ಪಾದನೆ ವಿರುದ್ಧ ಶೂನ್ಯ ಸಹಿಷ್ಣುತೆ ನೀತಿ ಪ್ರತಿಪಾದನೆ

೪. ಜೆಇಇ ಅಡ್ವಾನ್ಸ್‌ಡ್ ಪರೀಕ್ಷೆ ಫಲಿತಾಂಶ ಪ್ರಕಟ ; ೨೪ ಅಭ್ಯರ್ಥಿಗಳಿಗೆ ೧೦೦ಕ್ಕೆ ೧೦೦ ಅಂಕ

೫. ಫ್ರೆಂಚ್ ಓಪನ್ ಗ್ರಾನ್‌ಸ್ಲಾಮ್ ಟೂರ್ನಿ ; ಕ್ವಾಟರ್ ಫೈನಲ್ ಪ್ರವೇಶಿಸಿದ ಹಾಲಿ ಚಾಂಪಿಯನ್ ಕಾರ್ಲೋಸ್ ಅಲ್ಕರಾಜ್

******************

ಭಾರತಕ್ಕೆ ಮೂರು ದಿನಗಳ ಅಧಿಕೃತ ಭೇಟಿಯ ಭಾಗವಾಗಿ ಪರಾಗ್ವೆ ಅಧ್ಯಕ್ಷ ಸ್ಯಾಂಟಿಯಾಗೊ ಪೆಲಾಯೊಸ್ ಇಂದು ದೆಹಲಿಗೆ ಆಗಮಿಸಿದ್ದಾರೆ. ಅವರೊಂದಿಗೆ ಸಚಿವರು, ಹಿರಿಯ ಅಧಿಕಾರಿಗಳು ಮತ್ತು ವ್ಯಾಪಾರ ಪ್ರತಿನಿಧಿಗಳು ಸೇರಿದಂತೆ ಉನ್ನತ ಮಟ್ಟದ ನಿಯೋಗವೂ ಆಗಮಿಸಿದೆ. ಈ ಭೇಟಿಯ ಸಮಯದಲ್ಲಿ, ಎರಡೂ ದೇಶಗಳ ದ್ವಿಪಕ್ಷೀಯ ಸಂಬಂಧಗಳ ಸಮಗ್ರ ಪರಿಶೀಲನೆಯನ್ನು

ಕೈಗೊಳ್ಳುವ ನಿರೀಕ್ಷೆಯಿದೆ. ಇದು ಪೆನಾ ಅವರ ಭಾರತದ ಮೊದಲ ಭೇಟಿಯಾಗಿದ್ದು, ಪರಾಗ್ವೆ ಅಧ್ಯಕ್ಷರೊಬ್ಬರ ಕೇವಲ ಎರಡನೇ ಭೇಟಿಯಾಗಿದೆ ಎಂದು ವಿದೇಶಾಂಗ ಸಚಿವಾಲಯ ಹೇಳಿಕೆಯಲ್ಲಿ ತಿಳಿಸಿದೆ. ತಮ್ಮ ಭೇಟಿಯ ಮೊದಲ ದಿನವಾದ ಇಂದು ಅಧ್ಯಕ್ಷ ಪೆನಾ ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ಮಾತುಕತೆ ನಡೆಸಿದರು. ಈ ಸಮಯದಲ್ಲಿ ಇಬ್ಬರೂ ನಾಯಕರು ದ್ವಿಪಕ್ಷೀಯ ಸಂಬಂಧಗಳ ಪ್ರಮುಖ ಅಂಶಗಳನ್ನು ಪರಿಶೀಲಿಸಿದ್ದಾರೆ. ಇದಕ್ಕೂ ಮುನ್ನ ಪೆರಾಗ್ವೆ ಅಧ್ಯಕ್ಷರನ್ನು ವಿದೇಶಾಂಗ ಸಚಿವ ಡಾ. ಎಸ್. ಜೈಶಂಕರ್ ಭೇಟಿಯಾಗಿ ಭಾರತ ಪೆರಾಗ್ವೆ ನಡುವಿನ ಸಹಕಾರ ಸಂಬಂಧ ಬಲಪಡಿಸುವ ಕುರಿತ ಅವರ ಬದ್ಧತೆಯನ್ನು ಶ್ಲಾಘಿಸಿದರು. ಅವರು ರಾಷ್ಟ್ರಪತಿ ದ್ರೌಪದಿ ಮುರ್ಮು, ಉಪ ರಾಷ್ಟ್ರಪತಿ ಜಗದೀಪ್ ಧಂಕರ್ ಮತ್ತು ವಿದೇಶಾಂಗ ಸಚಿವ ಡಾ. ಎಸ್. ಜೈಶಂಕರ್ ಅವರನ್ನು ಸಹ ಭೇಟಿ ಮಾಡಲಿದ್ದಾರೆ. ಪೆನಾ ಬುಧವಾರ ಪರಾಗ್ವೆಗೆ ಮರಳುವ ಮೊದಲು ಮುಂಬೈಗೆ ಭೇಟಿ ನೀಡಲಿದ್ದಾರೆ. ಮುಂಬೈನಲ್ಲಿ ಅವರು ರಾಜ್ಯ ರಾಜಕೀಯ ನಾಯಕರು, ವ್ಯಾಪಾರ ಮತ್ತು ಕೈಗಾರಿಕೆಗಳ ಪ್ರತಿನಿಧಿಗಳು ಹಾಗೂ ತಂತ್ರಜ್ಞಾನ ಕ್ಷೇತ್ರದ ಪ್ರಮುಖರನ್ನು ಭೇಟಿ ಮಾಡಲಿದ್ದಾರೆ. ಭಾರತ ಮತ್ತು ಪರಾಗ್ವೆ ೧೯೬೧ ರಲ್ಲಿ ರಾಜತಾಂತ್ರಿಕ ಸಂಬಂಧಗಳನ್ನು ಸ್ಥಾಪಿಸಿದವು, ದಶಕಗಳಿಂದ ವ್ಯಾಪಾರ, ಕೃಷಿ, ಆರೋಗ್ಯ, ಔಷಧ ಮತ್ತು ಮಾಹಿತಿ ತಂತ್ರಜ್ಞಾನ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಎರಡೂ ದೇಶಗಳು ಸಹಕಾರವನ್ನು ಬೆಳೆಸಿಕೊಂಡಿವೆ. ಲ್ಯಾಟಿನ್ ಅಮೇರಿಕನ್ ಪ್ರದೇಶದಲ್ಲಿ ಭಾರತದ ಪ್ರಮುಖ ವ್ಯಾಪಾರ ಪಾಲುದಾರ ಪರಾಗ್ವೆ. ಆಟೋ-ಮೊಬೈಲ್ ಮತ್ತು ಔಷಧೀಯ ವಲಯದಲ್ಲಿ ಹಲವಾರು ಭಾರತೀಯ ಕಂಪನಿಗಳು ಪರಾಗ್ವೆಯಲ್ಲಿ ತಮ್ಮ ಅಸ್ತಿತ್ವವನ್ನು ಹೊಂದಿವೆ. ಪರಾಗ್ವೆಯ ಕಂಪನಿಗಳು ಭಾರತದಲ್ಲಿಯೂ ತಮ್ಮ ಅಸ್ತಿತ್ವವನ್ನು ಹೊಂದಿದ್ದು, ಎರಡೂ ರಾಷ್ಟ್ರಗಳ ನಡುವಿನ ಆರ್ಥಿಕ ಸಂಬಂಧಗಳಿಗೆ ಕೊಡುಗೆ ನೀಡುತ್ತಿವೆ. ವಿಶ್ವಸಂಸ್ಥೆಯ ಸುಧಾರಣೆಗಳು, ಹವಾಮಾನ ಬದಲಾವಣೆ, ನವೀಕರಿಸಬಹುದಾದ ಇಂಧನ ಮತ್ತು ಭಯೋತ್ಪಾದನೆಯನ್ನು ಎದುರಿಸುವುದು ಸೇರಿದಂತೆ ವಿವಿಧ ಅಂತರರಾಷ್ಟ್ರೀಯ ವಿಷಯಗಳ ಕುರಿತು ಎರಡೂ ದೇಶಗಳು ಸಾಮಾನ್ಯ ಅಭಿಪ್ರಾಯಗಳನ್ನು ಹಂಚಿಕೊಳ್ಳುತ್ತವೆ.

*******************

ಭಯೋತ್ಪಾದನೆ ವಿರುದ್ಧ ತಾತ್ವಿಕ ಮತ್ತು ಧೃಡ ನಿಲುವಿಗೆ ಬದ್ಧತೆಯಾಗಿ ಹಾಗೂ ಆಪರೇಷನ್ ಸಿಂದೂರ್ ಅಡಿ ಮುಂದುವರೆದ ಪ್ರಯತ್ನಗಳ ಭಾಗವಾಗಿ ಭಾರತ ವಿವಿಧ ರಾಷ್ಟ್ರಗಳಿಗೆ

ಕಳುಹಿಸಿರುವ ಏಳು ಸರ್ವಪಕ್ಷ ನಿಯೋಗಗಳು ಉನ್ನತಮಟ್ಟದ ಸಭೆಗಳಲ್ಲಿ ತೊಡಗಿದ್ದಾರೆ. ಈ ನಿಯೋಗಗಳು ಜಾಗತಿಕ ಮಟ್ಟದಲ್ಲಿ ಭಯೋತ್ಪಾದನೆ ವಿರುದ್ಧ ಭಾರತದ ಶೂನ್ಯ, ಸಹಿಷ್ಣುತೆ, ನೀತಿ ಕುರಿತು ಪ್ರತಿಪಾದಿಸುತ್ತಿದ್ದಾರೆ. ಇಥಿಯೋಪಿಯಾ ಪ್ರವಾಸ ಮುಕ್ತಾಯಗೊಳಿಸಿರುವ ಎನ್‌ಸಿಪಿ, ಎಸ್‌ಪಿ ಸಂಸದೆ ಸುಪ್ರಿಯ ಸುಳೆ ನೇತೃತ್ವದ ನಿಯೋಗ ಈಜಿಪ್ಟ್ ತಲುಪಿದೆ. ಜೆಡಿಯು ಸಂಸದ ಸಂಜಯ್ ಝಾ ನೇತೃತ್ವದ ನಿಯೋಗ ಮಲೇಷಿಯಾದ ರಾಷ್ಟ್ರೀಯ ಏಕತೆಯ ಉಪಸಚಿವರ ನೇತೃತ್ವದಲ್ಲಿ ಪ್ರತಿನಿಧಿಗಳ ನಿಯೋಗವನ್ನು ಭೇಟಿ ಮಾಡಿದೆ. ಇದಕ್ಕೂ ಮುನ್ನ ಶಿವಸೇನಾ ಸಂಸದ ಶ್ರೀಕಾಂತ ಶಿಂಧೆ ನೇತೃತ್ವದ ನಿಯೋಗ ಲಿಬೇರಿಯಾದಲ್ಲಿ ಭಾರತೀಯ ಸಮುದಾಯದೊಂದಿಗೆ ಸಂವಾದ ನಡೆಸಿತು. ಈ ವೇಳೆ ಮಾತನಾಡಿದ ಶ್ರೀಕಾಂತ್ ಶಿಂಧೆ, ೪ ರಿಂದ ೫ ದಶಕಗಳ ಕಾಲ ಭಯೋತ್ಪಾದನೆ ವಿರುದ್ಧ ಹೋರಾಟದಲ್ಲಿ ನಿರತವಾಗಿರುವ ನಡುವೆಯೂ ಭಾರತ ಈಗಲೂ ತಂತ್ರಜ್ಞಾನದ ಶಕ್ತಿ ಕೇಂದ್ರವಾಗಿದೆ ಎಂದು ಹೇಳಿದ್ದಾರೆ.

ಧ್ವನಿ : ಶ್ರೀಕಾಂತ್ ಶಿಂಧೆ (೨೭ ಸೆಕೆಂಡ್‌ಗಳು)

ಬಿಜೆಪಿ ಸಂಸದ ರವಿಶಂಕರ್ ಪ್ರಸಾದ ನೇತೃತ್ವದ ನಿಯೋಗ ಬ್ರಿಟನ್‌ನಲ್ಲಿ ಅಲ್ಲಿನ ವಿದೇಶಾಂಗ ಕಾರ್ಯದರ್ಶಿ ಪ್ರೀತಿ ಪಟೇಲ್ ಮತ್ತು ಅವರ ನಿಯೋಗವನ್ನು ಭೇಟಿ ಮಾಡಿತು. ಹಾಗೆಯೇ ಬಿಜೆಪಿ ಸಂಸದ ಬೈಜಯಂತ್ ಪಾಂಡ ನೇತೃತ್ವದ ನಿಯೋಗ ಅಲ್ಜೇರಿಯಾದಲ್ಲಿ ಅಲ್ಲಿನ ವಿದೇಶಾಂಗ ವ್ಯವಹಾರಗಳು ಸಹಕಾರ ಸಮಿತಿಯ ಅಧ್ಯಕ್ಷರನ್ನು ಭೇಟಿ ಮಾಡಿದೆ. ಪ್ರಸ್ತುತ ಬ್ರೆಜಿಲ್‌ನಲ್ಲಿರುವ ಕಾಂಗ್ರೆಸ್ ಸಂಸದ ಶಶಿ ತರೂರ್ ನೇತೃತ್ವದ ನಿಯೋಗ ನಾಳೆ ಅಮೆರಿಕಗೆ ಪ್ರಯಾಣ ಬೆಳಸಲಿದೆ. ಕೊಲೊರ್ಯಾಡೊದ ಬೌಲ್ಡರ್‌ನಲ್ಲಿ ನಡೆದ ಭಯೋತ್ಪಾದಕ ದಾಳಿಯ ಕುರಿತು ಕಳವಳ ವ್ಯಕ್ತಪಡಿಸಿರುವ ಅವರು, ಭಾರತ ಹಾಗೂ ಅಮೆರಿಕದಲ್ಲಿ ಭಯೋತ್ಪಾದನೆಗೆ ಯಾವುದೇ ಜಾಗವಿಲ್ಲ ಎಂಬ ಅಮೆರಿಕ ಕಾರ್ಯದರ್ಶಿ ಮಾರ್ಕ್ ರುಬಿಯೋ ಅವರ ದೃಷ್ಟಿಕೋನದೊಂದಿಗೆ ಸಹಮತ ವ್ಯಕ್ತಪಡಿಸಿದ್ದಾರೆ.

*******************

ದೇಶಾದ್ಯಂತ ಕೋವಿಡ್ ಪ್ರಕರಣಗಳು ವರದಿಯಾಗುತ್ತಿದ್ದು, ಇದುವರೆಗೂ ೩ ಸಾವಿರದ ೯೬೧ ಕೋವಿಡ್-೧೯ ಪ್ರಕರಣಗಳು ವರದಿಯಾಗಿವೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದ

ಪ್ರಕಾರ ಕೇರಳದಲ್ಲಿ ಅತಿ ಹೆಚ್ಚು ಅಂದರೆ ೧ ಸಾವಿರದ ೪೩೫ ಪ್ರಕರಣಗಳು ದಾಖಲಾಗಿದ್ದು, ಮಹಾರಾಷ್ಟ್ರದಲ್ಲಿ ೫೦೪ ಪ್ರಕರಣಗಳು ಮತ್ತು ದೆಹಲಿಯಲ್ಲಿ ೪೮೨ ಪ್ರಕರಣಗಳು ದಾಖಲಾಗಿವೆ.

*******************

ಕಾನ್‌ಪುರ್ ಭಾರತೀಯ ತಂತ್ರಜ್ಞಾನ ಸಂಸ್ಥೆ ಇಂದು ಜಂಟಿ ಪ್ರವೇಶ ಪರೀಕ್ಷೆ - ಜೆಇಇ ಅಡ್ವಾನ್ಸ್‌ಡ್ - ೨೦೨೫ರ ಫಲಿತಾಂಶ ಪ್ರಕಟಿಸಿದೆ. ವಿದ್ಯಾರ್ಥಿಗಳು Diesuಟಣs೨೫.ೀeeಚಿಜv.ಚಿಛಿ.iಟಿ ಮೂಲಕ ಫಲಿತಾಂಶ ತಿಳಿದುಕೊಳ್ಳಬಹುದಾಗಿದೆ. ಈ ಬಾರಿ ಪರೀಕ್ಷೆಗೆ ಹಾಜರಾಗಿದ್ದ ೧.೮ ಲಕ್ಷಕ್ಕೂ ಅಧಿಕ ಅಭ್ಯರ್ಥಿಗಳಲ್ಲಿ ೫೪ ಸಾವಿರದ ೩೭೮ ವಿದ್ಯಾರ್ಥಿಗಳು ಆಯ್ಕೆಯಾಗಿದ್ದಾರೆ. ೨೪ ಅಭ್ಯರ್ಥಿಗಳು ೧೦೦ಕ್ಕೆ ೧೦೦ ಅಂಕ ಗಳಿಸಿದ್ದಾರೆ. ತಾಂತ್ರಿಕ ಶಿಕ್ಷಣಕ್ಕಾಗಿ ದೇಶಾದ್ಯಂತ ಇರುವ ಪ್ರತಿಷ್ಠಿತ ಐಐಟಿ ಸಂಸ್ಥೆಗಳು ಮತ್ತು ಇತರ ಶೈಕ್ಷಣಿಕ ಸಂಸ್ಥೆಗಳಲ್ಲಿ ಪ್ರವೇಶಕ್ಕಾಗಿ ಜೆಇಇ ಅಡ್ವಾನ್ಸಡ್ ಪರೀಕ್ಷೆ ನಡೆಸಲಾಗುತ್ತದೆ.

*******************

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರಿಂದು ನವದೆಹಲಿಯ ಭಾರತ ಮಂಟಪದಲ್ಲಿ ನಡೆಯುವ ಅಂತಾರಾಷ್ಟ್ರೀಯ ವಿಮಾನ ಸಾರಿಗೆ ಸಂಘಟನೆ - ಐಎಟಿಎ ಯ ೮೧ನೇ ವಾರ್ಷಿಕ ಮಹಾಸಭೆಯಲ್ಲಿ ಭಾಗವಹಿಸಲಿದ್ದಾರೆ. ಈ ಸಂದರ್ಭದಲ್ಲಿ ಅವರು ಸಭಿಕರನ್ನುದ್ದೇಶಿಸಿ ಭಾಷಣ ಮಾಡಲಿದ್ದಾರೆ. ನಿನ್ನೆ ಆರಂಭವಾದ ಐಎಟಿಎ ಕಾರ್ಯಕ್ರಮ ನಾಳೆ ಮುಕ್ತಾಯವಾಗಲಿದೆ. ವಿಶ್ವ ವಿಮಾನ ಸಾರಿಗೆ ಶೃಂಗಸಭೆಯಲ್ಲಿ ವಿಮಾನೋದ್ಯಮ ಎದುರಿಸುತ್ತಿರುವ ಪ್ರಮುಖ ಸಮಸ್ಯೆಗಳಾದ ವಿಮಾನೋದ್ಯಮದ ಆರ್ಥಿಕತೆ, ವಿಮಾನ ಸಂಪರ್ಕ, ಇಂಧನ ಭದ್ರತೆ, ಸ್ಥಿರ ವಿಮಾನ ಇಂಧನ ಉತ್ಪಾದನೆ, ಡಿಕಾರ್ಬನೈಜೇಶನ್‌ಗೆ ಹಣಕಾಸು ಮತ್ತು ನಾವೀನ್ಯತೆಗಳ ಕುರಿತ ಚರ್ಚೆ ನಡೆಯಲಿದೆ. ಪ್ರಧಾನಮಂತ್ರಿ ಕಾರ್ಯಾಲಯದ ಪ್ರಕಾರ, ಈ ಕಾರ್ಯಕ್ರಮದಲ್ಲಿ ಜಾಗತಿಕ ನಾಯಕರು ಭಾರತದ ವಿಮಾನೋದ್ಯಮ ಕ್ಷೇತ್ರದಲ್ಲಿ ಸಂಭವಿಸಿದ ಮಹತ್ವದ ಪರಿವರ್ತನೆ ಹಾಗೂ ದೇಶದ ಸಾಮಾಜಿಕ-ಆರ್ಥಿಕ ಬೆಳವಣಿಗೆಗೆ ಅದರ ಕೊಡುಗೆಗೆ ಸಾಕ್ಷಿಯಾಗಲಿದ್ದಾರೆ. ಐಎಟಿಎನ ವಾರ್ಷಿಕ ಸಭೆ ಕಳೆದ ಬಾರಿ ೧೯೮೩ರಲ್ಲಿ ನಡೆದಿತ್ತು.

*******************

ತೆಲಂಗಾಣ ರಾಜ್ಯೋತ್ಸವದ ಅಂಗವಾಗಿ ರಾಷ್ಟ್ರಪತಿ ದ್ರೌಪದಿ ಮುರ್ಮು, ಉಪರಾಷ್ಟ್ರಪತಿ ಜಗದೀಪ್ ಧನ್‌ಕರ್, ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಹಲವು ಗಣ್ಯರು ತೆಲಂಗಾಣ ಜನತೆಗೆ ಶುಭಾಶಯ ಕೋರಿದ್ದಾರೆ. ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ರಾಷ್ಟ್ರಪತಿ ತೆಲಂಗಾಣ, ಶ್ರೀಲಂಕಾ, ಸಾಂಸ್ಕೃತಿಕ ಪರಂಪರೆ ಮತ್ತು ಅಭೂತಪೂರ್ವ ಆಧುನಿಕ, ಆರ್ಥಿಕ ಮತ್ತು ತಂತ್ರಜ್ಞಾನ ಅಭಿವೃದ್ಧಿಯ ಪರಿಸರ ವ್ಯವಸ್ಥೆ ಹೊಂದಿದೆ. ತೆಲಂಗಾಣ ಜನತೆ ಅಭಿವೃದ್ಧಿ ಮತ್ತು ಸಮೃದ್ಧಿಯ ಪಥದಲ್ಲಿ ಮುಂದುವರೆಯಲಿ ಎಂದು ಆಶಿಸಿದ್ದಾರೆ. ಉಪರಾಷ್ಟ್ರಪತಿ ತಮ್ಮ ಸಂದೇಶದಲ್ಲಿ ರಾಜ್ಯವು ತನ್ನ ಸ್ಥಿತಿಸ್ಥಾಪಕತ್ವ ಮತ್ತು ವಿಶಿಷ್ಟ ಸಾಂಸ್ಕೃತಿಕ ಗುರುತಿಗೆ ಹೆಸರುವಾಸಿಯಾಗಿದೆ ಮತ್ತು ವಿವಿಧ ಕ್ಷೇತ್ರಗಳಲ್ಲಿ ಗಮನಾರ್ಹ ಪ್ರಗತಿಯನ್ನು ಸಾಧಿಸಿದೆ ಎಂದಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರು ತೆಲಂಗಾಣ ರಾಜ್ಯೋತ್ಸವದಂದು ಜನರಿಗೆ ಶುಭಾಶಯ ಕೋರಿದ್ದಾರೆ. ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಅವರು, ರಾಜ್ಯವು ರಾಷ್ಟ್ರೀಯ ಪ್ರಗತಿಗೆ ಅಸಂಖ್ಯಾತ ಕೊಡುಗೆಗಳನ್ನು ನೀಡಿದೆ. ಕಳೆದ ದಶಕದಲ್ಲಿ, ರಾಜ್ಯದ ಜನರಿಗೆ ಜೀವನ ಸುಲಭತೆಯನ್ನು ಹೆಚ್ಚಿಸಲು ಸರ್ಕಾರ ಅನೇಕ ಕ್ರಮಗಳನ್ನು ಕೈಗೊಂಡಿದೆ ಎಂದು ಹೇಳಿರುವ ಅವರು, ರಾಜ್ಯದ ಜನರ ಯಶಸ್ಸು ಮತ್ತು ಸಮೃದ್ಧಿಗಾಗಿ ಅವರು ಹಾರೈಸಿದರು.

*******************

ಭಾರೀ ಮಳೆಯಿಂದ ಈಗಾಗಲೇ ತತ್ತರಿಸಿರುವ ಈಶಾನ್ಯ ರಾಜ್ಯಗಳಾದ ಅಸ್ಸಾಂ, ಮೇಘಾಲಯ, ನಾಗಾಲ್ಯಾಂಡ್ ಮತ್ತು ಮಣಿಪುರದ ಕೆಲವು ಭಾಗಗಳಲ್ಲಿ ಇಂದೂ ಕೂಡ ಭಾರೀ ಮಳೆಯಾಗುವ ಸಾಧ್ಯತೆಯಿದೆ.ಹಾಗೆಯೇ ಅರುಣಾಚಲಪ್ರದೇಶ, ಕೇರಳ, ಮಾಹೆ, ಸಿಕ್ಕಿಂ ಮತ್ತು ಉತ್ತರಾಖಂಡದ ಕೆಲವು ಭಾಗಗಳಲ್ಲೂ ಭಾರೀ ಮಳೆಯಾಗುವ ಸಂಭವವಿದೆ ಎಂದು ಭಾರತೀಯ ಹವಾಮಾನ ಇಲಾಖೆ ತಿಳಿಸಿದೆ.

*******************

ಫ್ರೆಂಚ್ ಓಪನ್ ಗ್ರ್ಯಾನ್ ಸ್ಲಾಮ್ ಟೆನಿಸ್ ಟೂರ್ನಿಯಲ್ಲಿ ಹಾಲಿ ಚಾಂಪಿಯನ್ ಕಾರ್ಲೋಸ್ ಅಲ್ಕರಾಜ್, ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಕ್ವಾರ್ಟರ್ ಫೈನಲ್ಸ್ ಪ್ರವೇಶಿಸಿದ್ದಾರೆ. ನಿನ್ನೆ ನಡೆದ ಸಿಂಗಲ್ಸ್ ವಿಭಾಗದ ಪ್ರೀ-ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಸ್ಪೇನ್ ನ ೨೨ ವರ್ಷದ ಕಾರ್ಲೋಸ್

ಅಲ್ಕರಾಜ್ ೭-೬, ೬-೩, ೪-೬, ೬-೪ ಸೆಟ್ ಗಳಿಂದ ಅಮೆರಿಕಾದ ಬೆನ್ ಶೆಲ್ಟನ್ ವಿರುದ್ಧ ಜಯಗಳಿಸಿ, ಮುನ್ನಡೆ ಸಾಧಿಸಿದರು. ಕ್ವಾರ್ಟರ್ ಫೈನಲ್ಸ್ ಸುತ್ತಿನಲ್ಲಿ ಕಾರ್ಲೋಸ್‌ಗೆ ೧೨ನೇ ಶ್ರೇಯಾಂಕಿತ ಆಟಗಾರ ಅಮೆರಿಕದ ಟಾಮಿಪಾಲ್ ಸವಾಲು ಎದುರಾಗಲಿದೆ. ಮಹಿಳೆಯರ ವಿಭಾಗದಲ್ಲಿ ವಿಶ್ವದ ನಂಬರ್ ಒನ್ ಆಟಗಾರ್ತಿ ಆರ್ಯನಾ ಸಬಾಲೆಂಕ ಕ್ವಾರ್ಟರ್ ಫೈನಲ್ಸ್ ಪ್ರವೇಶಿಸಿದ್ದಾರೆ. ನಿನ್ನೆ ನಡೆದ ಪಂದ್ಯದಲ್ಲಿ ಅವರು, ಅಮಾಂಡ ಅನಿಸಿಮೋವಾ ಅವರನ್ನು ೭-೫, ೬-೩ ನೇರ ಸೆಟ್ ಗಳಿಂದ ಪರಾಭವಗೊಳಿಸಿದರು. ಈ ಮಧ್ಯೆ ಮೂರು ಬಾರಿಯ ಹಾಲಿ ಚಾಂಪಿಯನ್ ಐಗಾಸ್ ಸ್ವಿಟೆಕ್, ಅಂತಿಮ ಲರ ಘಟ್ಟ ತಲುಪಿದ್ದಾರೆ. ತಮ್ಮ ಪ್ರೀ-ಕ್ವಾರ್ಟರ್ ಫೈನಲ್ಸ್ ಪಂದ್ಯದಲ್ಲಿ ಅವರು, ಎಲೆನಾ ರಿಬಾಕಿನಾ ಅವರ ವಿರುದ್ಧ ೧-೬, ೬-೩, ೭-೫ ಸೆಟ್ ಗಳಿಂದ ಜಯ ಗಳಿಸಿದರು.

*********END*********